ಬಿ.ಎಲ್.ಡಿ.ಇ. ಸಂಸ್ಥೆಯ

# ಎಸ್.ಬಿ.ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಯ, ವಿಜಯಪುರ

( ನ್ಯಾಕ 3ನೇ ಸುತ್ತಿನಲ್ಲಿ 'ಎ' ಗ್ರೇಡ್ ಮಾನ್ಯತೆ)

## ಕನ್ನಡ ವಿಭಾಗ ಆಯೋಜಿತ

# ಕನ್ನಡ ಭಾಷೆ : ಸಾಧ್ಯತೆಗಳು

## ಒಂದು ದಿನದ ರಾಷ್ಟ್ರಮಟ್ಟದ ಆನ್‌ಲೈನ್ ವಿಚಾರ ಸಂಕಿರಣ

**ದಿನಾಂಕ : 04-06-2020 ಬೆಳಗ್ಗೆ 10 -30 ಗಂಟೆಗೆ**

ಉದ್ಘಾಟನಾ ಸಮಾರಂಭ : ಬೆಳಗ್ಗೆ 10-30 ರಿಂದ 11-00

ಉದ್ಘಾಟಕರು :

**ಡಾ. ಹೆಚ್. ಎಂ. ಮಹೇಶ್ವರಯ್ಯ**
ಕುಲಪತಿಗಳು, ಕೇಂದ್ರಿಯ ವಿಶ್ವವಿದ್ಯಾಲಯ, ಕಲಬುರಗಿ

**ಗೋಷ್ಠಿ- 1 11 : 05 ರಿಂದ 11 : 40**

ಸಂಪನ್ಮೂಲ ವ್ಯಕ್ತಿಗಳು :

**ಡಾ ಪ್ರೇಮ ಸಿದ್ಧರಾಜು**
ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಜಿ.ಆರ್ ಮಹಿಳಾ ಪದವಿ ಕಾಲೇಜು, ಬೆಂಗಳೂರು

**ವಿಷಯ : ಕನ್ನಡ : ಮಾಧ್ಯಮಗಳು**

**ಗೋಷ್ಠಿ- 2 11 : 45 ರಿಂದ 12 : 20**

ಸಂಪನ್ಮೂಲ ವ್ಯಕ್ತಿಗಳು :

**ಪ್ರೊ. ಚಂದ್ರೇಗೌಡ ಕುಲಕರ್ಣಿ**
ವಿಶ್ರಾಂತ. ಪ್ರಾಧ್ಯಾಪಕರು, ಬೆಂಗಳೂರು

**ವಿಷಯ : ಕನ್ನಡ : ಹೊಸ ತಂತ್ರಜ್ಞಾನ**

ಅಧ್ಯಕ್ಷರು : **ಡಾ. ಎ. ಎಸ್. ಪೂಜಾರಿ.** ಪ್ರಾಚಾರ್ಯರು

### ಸುಚನೆಗಳು

1) ವಿಚಾರ ಸಂಕಿರಣವನ್ನು **ZOOM APP** ನಲ್ಲಿ ನಡೆಸಲಾಗುವುದು
2) ನೊಂದಣಿಯ ಕೊನೆಯದಿನ 03-06-2020
3) ಪ್ರಮಾಣ ಪತ್ರವನ್ನು ನಿಮ್ಮ ಇ ಮೇಲೆ ಗೆ ಕಳಿಸಲಾಗುವುದು
4) ನೊಂದಣಿಗೆ ಕೆಳಗಿನ ವಾಟ್ಸಾಪ್ ಮೂಲಕ ಮಾಡಿಕೊಳ್ಳುವುದು
   ಪ್ರೊ. ಬಿ.ಬಿ ಡೆಂಗನವರ 9902495695
   ಡಾ. ಎಂ.ಎಸ್. ಮಾಗಣಗೇರಿ 9986213177
5) ನೊಂದಣಿ ಶುಲ್ಕ ರೂ 100,

**Name :** ಡಾ. ಉಷಾದೇವಿ ಹಿರೇಮಠ
**A / No : 36413393020**
**IFSC : SBIN0014429**
**Bank : SBI, BLDE. CAMPUS VIJAYAPUR**

---

**ಪ್ರೊ. ಬಿ.ಬಿ. ಡೆಂಗನವರ**
ಸಂಘಟನಾ ಕಾರ್ಯದರ್ಶಿಗಳು
ಮುಖ್ಯಸ್ಥರು, ಕನ್ನಡ ವಿಭಾಗ

**ಡಾ. ಎಂ.ಎಸ್. ಮಾಗಣಗೇರಿ**
ಸಂಯೋಜಕರು

**ಡಾ. ಉಷಾದೇವಿ ಹಿರೇಮಠ**
ಸಹ ಕಾರ್ಯದರ್ಶಿಗಳು

**ಡಾ. ಎ.ಎಸ್. ಪೂಜಾರಿ**
ಪ್ರಾಚಾರ್ಯರು

## ಬಿ.ಎಲ್.ಡಿ.ಇ. ಸಂಸ್ಥೆ

## ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯ.

## ಕನ್ನಡ ವಿಭಾಗ

## ಆನಲೈನ್ ರಾಷ್ಟ್ರೀಯ ವಿಚಾರ ಸಂಕಿರಣ ವರದಿ

ದಿನಾಂಕ:04/06/2020 ಕ್ಕೆ ಕನ್ನಡ ವಿಭಾಗದಿಂದ "ಕನ್ನಡ ಭಾಷೆ: ಸಾಧ್ಯತೆಗಳು" ಎಂಬ ವಿಷಯದ ಮೇಲೆ ಒಂದು ದಿನದ ರಾಷ್ಟ್ರಮಟ್ಟದ ಆನಲೈನ್ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

ಈ ವಿಚಾರ ಸಂಕಿರಣವನ್ನು ಕಲಬುರಗಿಯ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳು ಆಗಿರುವ ಡಾ:ಎಚ್.ಎಂ. ಮಹೇಶ್ವರಯ್ಯ ಅವರು ಉದ್ಘಾಟಿಸಿದರು. ತಮ್ಮ ಉದ್ಘಾಟನೆಯ ನುಡಿಯಲ್ಲಿ "ಪ್ರಾಚೀನ ಪರಂಪರೆ ಹೊಂದಿರುವ ಕನ್ನಡ ಭಾಷೆಯು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಲಿದೆ. ವಿಜ್ಞಾನ–ತಂತ್ರಜ್ಞಾನಗಳ ದಟ್ಟ ಪ್ರಭಾವ, ಜಾಗತೀಕರಣ, ಗಣಕೀಕರಣ,ಪಾಶ್ಚಾತೀಕರಣ, ಆಧುನೀಕರಣ ಮುಂತಾದವುಗಳು ಇಂದು ಕನ್ನಡ ಭಾಷೆಯನ್ನು ಡಿಜಿಟಲೀಕರಣಗೊಳಿಸುವ ಅಗತ್ಯವಿದೆ. ಬದಲಾಗುತ್ತಿರುವ ಕಾಲಘಟ್ಟದ ವಿದ್ಯಮಾನಗಳಿಗೆ ತಕ್ಕಂತೆ ಭಾಷೆಯನ್ನು ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಮುನ್ನಡೆಸುವ ಅಗತ್ಯವಿದೆ. ಭಾಷಾ ಅಭಿವೃದ್ದಿಗೆ ಹಲವಾರು ಮಾರ್ಗಗಳನ್ನು ರೂಪಿಸಿಕೊಂಡು ಜಾಗತಿಕ ಸಾಹಿತ್ಯದಲ್ಲಿ ಕನ್ನಡ ಭಾಷೆಯ ಉನ್ನತ ಸ್ಥಿತಿಯನ್ನು ಕಂಡುಕೊಳ್ಳಲು ಸಾಧ್ಯವಾಗುವುದು. ಎಂದು ಹೇಳಿದರು. ಇಡಿ ಜಗತ್ತಿನಲ್ಲಿ ತಲ್ಲಣಿಸುತ್ತಿರುವ 'ಕೋರೊನಾ' ವೈರಸನ ಪರಿಣಾಮದಿಂದ ಮನೆಯಲ್ಲಿ ಕುಳಿತು ಜಗತ್ತನ್ನೆ ತಂತ್ರಜ್ಞಾನದ ಮೂಲಕ ಕಂಡುಕೊಳ್ಳಲು ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಭಾಷೆಯನ್ನು ಎಲ್ಲ ವರ್ಗದವರು ದುಡಿಸಿಕೊಳ್ಳುವ ಅಗತ್ಯವಿದೆ ಎಂದರು. ಬರಿ ಭಾವನಾತ್ಮಕವಾಗಿ ಕನ್ನಡ ಭಾಷೆಯನ್ನು ತಿಳಿಯದೇ, ಅರ್ಥೈಸಿಕೊಳ್ಳದೇ, ಕನ್ನಡ ಭಾಷಾಯ ಪಾರಮ್ಯತೆಯನ್ನು ಹೆಚ್ಚಿಸುವತಂಹ ತಾಂತ್ರಿಕ ಜ್ಞಾನವನ್ನು ಅಳವಡಿಸಿಕೊಳ್ಳುವತ್ತ ಹೆಜ್ಜೆಯನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಿಲ್ಲಿ ಪ್ರಯತ್ನ ಮಾಡೋಣ ಎಂದು ಉದ್ಘಾಟನಾ ಪರ ನುಡಿಗಳನ್ನು ಆಡಿದರು.

ಈ ರಾಷ್ಟ್ರೀಯ ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಬೆಂಗಳೂರಿನ ಎಸ್.ಜೆ.ಆರ್.ಮಹಿಳಾ ಪದವಿ ಕಾಲೇಜಿನ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ:ಪ್ರೇಮ ಸಿದ್ದರಾಜು ಅವರು ಸಂಪನ್ಮೂಲ ವ್ಯೆಕ್ತಿಗಳಾಗಿ " ಕನ್ನಡ ಮಾಧ್ಯಮಗಳು" ಎಂಬ ವಿಷಯದ ಮೇಲೆ ವಿದ್ವತಪೂರ್ಣವಾಗಿ ತಮ್ಮ ವಿಚಾರಗಳನ್ನು ಮಂಡಿಸಿದರು.ನಮ್ಮ ಸಾಹಿತ್ಯ ಸಂಸ್ಕ್ರತಿಯನ್ನು ಪ್ರಸಾರ,ಪ್ರಚಾರ ಮಾಡುವಲ್ಲಿ ಪ್ರಸಾರವಾಹಿನಿಗಳಾಗಿ ಮಾಧ್ಯಮಗಳು ಕಾರ್ಯವನ್ನು ಮರೆಯುವಂತಿಲ್ಲ. ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ರೇಡಿಯೊ,ಟಿ.ವಿ, ಟ್ವಿಟರಗಳ ಪ್ರಯತ್ನ ಸಾಕಷ್ಟಿದೆ. ಆದರೆ ಕನ್ನಡ ಖಾಸಗಿ ಚಾನಲೆಗಳನ್ನು ಕನ್ನಡ ಭಾಷೆಯ ಬಳಕೆಗಿಂತ ಇಂಗ್ಲೀಷ್ ಪದಗಳ ಬಳಕೆಯೇ ಅಧಿಕವಾಗಿರುವುದನ್ನು ಕಾಣುತ್ತೇವೆ.ಭಾಷೆಯ ಶ್ರೇಷ್ಠತೆಯನ್ನು ತಂದುಕೊಡುವಲ್ಲಿ ಮಾಧ್ಯಮಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಸಾಕಷ್ಟಿವೆ.ಮಾಧ್ಯಮಗಳು

ಸಾಂಸ್ಕೃತಿಕ ಜವಾಬ್ದಾರಿಯೊಂದಿಗೆ ಸುದ್ದಿಗಳನ್ನು ಬಿತ್ತರಿಸುವ ಕಾರ್ಯ ಪ್ರಮುಖವಾಗಿದೆ ಎಂದರು. ಹಾಗೂ ಇವರು ಮಂಡಿಸಿದ  ವಿಚಾರಗಳಿಗೆ ಸ್ಪಂದಿಸಿ ಬೇರೆ ಬೇರೆ ಪ್ರಾಧ್ಯಾಪಕರು ಸಂವಾದ ನಡೆಸಿದರು.

2ನೇ ಗೋಷ್ಠಿಯಲ್ಲಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಪ್ರೋ.ಚಂದ್ರೇಗೌಡ. ಕುಲಕರ್ಣಿ ಅವರು "ಕನ್ನಡ ಹೊಸ ತಂತ್ರಜ್ಞಾನ" ಎಂಬ ವಿಷಯ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದರು.ಕನ್ನಡ ಭಾಷೆ ಮತ್ತು ತಂತ್ರಜ್ಞಾನಗಳ ಸಂಬಂಧ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಾಣತೊಡಗಿದೆ.ಅಲ್ಲದೆ ಭಾಷೆಯ ಬಳಕೆಯ ಹೆಚ್ಚು ವಲಯಗಳನ್ನು ತಂತ್ರಜ್ಞಾನ ಪ್ರಭಾವಿಸತೊಡಗಿದೆ. ಶಾಸನ ಮತ್ತು ತಾಳೆಗರಿಗಳ ಮೇಲೆ ಅಕ್ಷರ ಮೂಡಿಸಿ ಪ್ರಾರಂಭಿಸಿದ ಬೆಳವಣಿಗೆ ಇಂದು ತಂತ್ರಜ್ಞಾನ ಮತ್ತು ವಿಜ್ಞಾನಗಳನ್ನು ಬಳಸಿಕೊಂಡು ಅಂತರಜಾಲದ ಮೂಲಕ ಜಗತ್ತನ್ನೆ ಭಾಷೆ–ಸಾಹಿತ್ಯ– ಸಂಸ್ಕೃತಿಗಳು ತಲುಪುತ್ತಿರುವುದು ಸಾಧನೆಯಾಗಿದೆ. ಒಟ್ಟಿನಲ್ಲಿ ತಂತ್ರಜ್ಞಾನವು ಇಂದಿನ ಆಧುನಿಕ ಕಾಲದಲ್ಲಿ ಭಾಷೆಯನ್ನು ಬೆಳೆಸಲು, ಉಳಿಸಲು, ತಿಳಿಸಲು, ತಂತ್ರಜ್ಞಾನ ಬಹುಮುಖ್ಯವಾಗಿದೆ ಎಂದರು.

ಈ ವಿಚಾರ ಸಂಕೀರಣದ ನಾಡಿನ ಬೇರೆ ಬೇರೆ ಜಿಲ್ಲೆಯ ಮಹಾವಿದ್ಯಾಲಯದ ಪ್ರಾಧ್ಯಾಪಕರು ಭಾಗವಹಿಸುದರು.ಮೈಸೂರು,ಮಂಡ್ಯ, ನಾಗಮಂಗಲ, ಧಾರವಾಡ, ಬೆಳಗಾಂ,ಜಿಲ್ಲೆಯ ಪ್ರಧ್ಯಾಪಕರು ಸಂಪನ್ಮೂಲ ವ್ಯಕ್ತಿಗಳ ವಿಚಾರಗಳಿಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಂವಾದ ನಡೆಸಿದರು.ಈ ಆನಲೈನ್ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ 112 ಜನ ನೋಂದಣಿ ಮಾಡಿಸಿ ಕಾರ್ಯಕ್ರಮವನ್ನುಯಶಸ್ವಿಗೊಳಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರು ಪ್ರೋ.ಬಿ.ಬಿ.ಡೆಂಗನವರ, ಸಂಯೋಜಕರಾದ ಡಾ.ಎಂ.ಎಸ್.ಮಾಗಣಗೆರಿ, ಕಾರ್ಯದರ್ಶಿಗಳಾದ ಡಾ.ಉಷಾದೇವಿ.ಹಿರೇಮತ, ಪ್ರೋ.ಎಸ್.ಜಿ.ಗೊರನಾಳ, ಪ್ರೋ.ಎಸ್.ಎಹ್.ಹೂಗಾರ,ಪ್ರೋ.ಜಯಶ್ರೀ.ಬಿರಾದಾರ ಉಪಸ್ಥಿತರಿದ್ದರು.